ದಿನಾಂಕಃ **18-07-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ 2 ರವರಿಂದ,**

1) ನಾನು ಎಂ ಎ ಪದವಿ ಪಡೆದುಕೊಂಡಿರುತ್ತೇನೆ. ನಾನು ಹತ್ತನೇ ತರಗತಿ ಉತ್ತೀರ್ಣ ವಾದ ನಂತರ ನೇರವಾಗಿ ಎಂ ಎ ಪದವಿ ಪಡೆದುಕೊಂಡಿರುತ್ತೇನೆ. ನಾನು ನಿವೃತ್ತ ಸಹಾಯಕ ಪೋಲೀಸ್ ನಿರೀಕ್ಷಕರು. ನಾನು ಸ್ವಂತ ಆಸ್ತಿ ಮಾಡಿಕೊಂಡಿರುವುದಿಲ್ಲ. ನಾನು ಬೆಂಗಳೂರಿನಲ್ಲಿ ಮದುವೆ ಆಗಿರುತ್ತೇನೆ. ನನಗೆ ಇಬ್ಬರು ಮಕ್ಕಳಿದ್ದು ಅವರಿಗೆ ಮದುವೆ ಆಗಿರುತ್ತದೆ. ನನ್ನ ಮದುವೆಯನ್ನು 2 ನೇ ಪ್ರತಿವಾದಿ ಮಾಡಿಸಿರುತ್ತಾರೆ. ನನ್ನ ಪತ್ನಿ ಗೃಹಿಣಿ. ನನ್ನ ಮತ್ತು 2 ನೇ ಪ್ರತಿವಾದಿಯ ನಡುವೆ 20 ವರ್ಷ ವಯಸ್ಸಿನ ಅಂತರ ಇರುತ್ತದೆ. ನನ್ನ ತಂದೆಯ ತಂದೆ ಕಡೆಯಿಂದ ದಾವಾ ಸ್ವತ್ತುಗಳು ಬಂದಿರುತ್ತವೆ. ಮರಳಿದಿಬ್ಬ ಗ್ರಾಮ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ನಾಲ್ಕನೇ ತಲೆಮಾರಿನವರು ಎಂದರೆ ನನಗೆ ಗೊತ್ತಿಲ್ಲ.

2) ನನ್ನ ತಾತನ ಹೆಸರು ಚಿಲ್ಲರೆ ಅಂಗಡಿ ರಂಗಯ್ಯ. ನನ್ನ ತಾತ ವ್ಯಾಪಾರ ಮಾಡುತ್ತಿದ್ದರು. ನನ್ನ ತಾತನಿಗೆ ಇಬ್ಬರು ಮಕ್ಕಳು. ನನ್ನ ತಾತ ಬದುಕಿದ್ದಾಗಲೇ ನಾಗಯ್ಯರವರಿಗೆ ಭಾಗ ನೀಡಿರುತ್ತಾರೆ. ಆದರೆ ದಾಖಲೆ ಇರುವುದಿಲ್ಲ. ನನ್ನ ತಾತನ ಜೀವಿತ ಅವಧಿಯಲ್ಲಿ ಇತರೆ ಆಸ್ತಿಗಳು ಇರುವ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ. ನಾನು ಈ ದಾವೆಯನ್ನು ಮೂರು ಸ್ವತ್ತುಗಳ ಮೇಲೆ ಸಲ್ಲಿಸಿರುತ್ತೇನೆ. ನನ್ನ ತಾತ ಯಾವಾಗ ತೀರಿಕೊಂಡು ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜಿ ಹೆಸರು ನನಗೆ ಗೊತ್ತಿರುವುದಿಲ್ಲ. ನನ್ನ ತಾತ ತೀರಿಕೊಂಡ ನಂತರ ನನ್ನ ಅಜ್ಜಿ ಎಷ್ಟು ವರ್ಷ ಬದುಕಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜಿ ಜೀವನೋಪಾಯಕ್ಕಾಗಿ ಏನು ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜಿ ಯಾವುದೇ ಆಸ್ತಿಯನ್ನು ಬಿಟ್ಟು ಹೋಗಿರುವುದಿಲ್ಲ.

3) ಮರಳಿಸಿದ್ದಯ್ಯ ರವರು ನಮ್ಮ ವಂಶದವರು. ಯಾವ ರೀತಿ ಸಂಬಂಧ ಎಂದು ನನಗೆ ಗೊತ್ತಿಲ್ಲ. ಸದರಿ ಯವರಿಗೆ ಮಿರ್ಲೆ ಗ್ರಾಮದಲ್ಲಿ ಆಸ್ತಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಭಾಗಕ್ಕೆ ಬಂದ ಆಸ್ತಿಯ ಪಕ್ಕದಲ್ಲಿ ಮರಳಿಸಿದ್ದಯ್ಯರವರಿಗೆ ಆಸ್ತಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ಹೆಸರು ಎಂ ಆರ್ ಮರಡಿರಂಗಯ್ಯ. ನನ್ನ ತಂದೆ ಸಿವಿಲ್ ಇಂಜಿನಿಯರ್ ಆಗಿದ್ದರು. ದಾವಾ ಸ್ವತ್ತುಗಳು ನನ್ನ ತಂದೆಗೆ ಯಾವಾಗ ಬಂದಿದ್ದು ಎಂದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತುಗಳಿಗೂ ಮತ್ತು ನನ್ನ ತಂದೆ ಸ್ವಾಧೀನ ಇರುವ ಸ್ವತ್ತಿಗೂ ವ್ಯತಾಸ ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ತಂದೆ ಅವಧಿಯಲ್ಲಿ ದಾವಾ ಸ್ವತ್ತುಗಳಲ್ಲಿ ಯಾವುದೇ ವಿವಾದ ಇರಲಿಲ್ಲ. ದಾವಾ ಸ್ವತ್ತುಗಳ ಬಗ್ಗೆ ನನ್ನ ತಾಯಿ ಯಾವುದೇ ದಾವೆ ಸಲ್ಲಿಸಿರುವುದಿಲ್ಲ.

4) ನನ್ನ ತಂದೆ 1965-66 ರಲ್ಲಿ ಸೇವೆಯಿಂದ ನಿವೃತ್ತಿ ಆಗಿರುತ್ತಾರೆ. ಆ ಸಮಯದಲ್ಲಿ ನನ್ನ ತಂದೆಗೆ 300 ರೂ ಪಿಂಚಣಿ ಹಣ ಬರುತ್ತಿತ್ತು. ನನ್ನ ತಂದೆ ಕೋಮಲ ಎಂಬುವವರಿಗೆ ಮದುವೆ ಮಾಡಿರುತ್ತಾರೆ. ನನ್ನ ತಂದೆ ಜೀವಂತ ಅವಧಿಯಲ್ಲಿ ಸ್ವಂತ ಆಸ್ತಿ ಮಾಡಿಕೊಂಡಿರುವುದಿಲ್ಲ. ಮಿರ್ಲೆ ಗ್ರಾಮದಲ್ಲಿ ನನ್ನ ತಂದೆಗೆ ನಿವೇಶನ ಇತ್ತು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.